# ದಿನಾಂಕ 05-02-2022 ರಂದು ಬೆಳಗ್ಗೆ 12.00 ಗಂಟೆಗೆ ವಾರ್ಡ್-88 ರ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ವಾರ್ಡ್ ಸಂಖ್ಯೆ-88 ಜೀವನ್‌ಭೀಮಾನಗರದ ಕೋಡಿಹಳ್ಳಿ ಸರ್ಕಾರಿ ಶಾಲೆಯಲ್ಲಿ ದಿನಾಂಕ : 05-02-2022 ರಂದು ಬೆಳಿಗ್ಗೆ 12:00 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಈ ಕೆಳಕಂಡಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ.

**ಸಭೆಗೆ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು**

| | | |
|---|---|---|
| 1. | ಶ್ರೀ.ಡಾ॥ನಾಗರಾಜ್.ಎಸ್ | -ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು, ವಾರ್ಡ್-88. |
| 2. | ಶ್ರೀಮತಿ.ಶಿಲ್ಪಶ್ರೀ | -ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ. |
| 3. | ಶ್ರೀ.ಹನುಮಂತಪ್ಪ | - ಕಿರಿಯ ಘನತ್ಯಾಜ್ಯ ಪರಿವೀಕ್ಷಕರು |
| 4. | ಶ್ರೀಮತಿ.ಪ್ರಭಾ | - ಸ.ಅ, ಬೆಸ್ಕಾಂ |
| 5. | ಶ್ರೀ. ಶ್ರೀ.ಲೋಹಿತ್ | - ಎಇ, ಬಿಡಬ್ಲ್ಯೂಎಸ್ಎಸ್‌ಬಿ |
| 6. | ಶ್ರೀಮತಿ ಮಮತಾ | - ಎಇ, ಬಿಡಬ್ಲ್ಯೂಎಸ್ಎಸ್‌ಬಿ |
| 7. | ಶ್ರೀ.ಲಾಲ್ ಸಾಹೇಬ್ | - ಮಾರ್ಷಲ್, ಬಿಬಿಎಂಪಿ |
| 8. | ಶ್ರೀ.ಚಂದ್ರ | - ಸದಸ್ಯರು |
| 9. | ಶ್ರೀ.ಜ್ಯೋತಿರಾಮಲಿಂಗಂ | - ಸದಸ್ಯರು |
| 10. | ಶ್ರೀ.ಮಧು | - ಸದಸ್ಯರು |
| 11. | ಶ್ರೀ.ಸದಾಶಿವನ್ | - ಸದಸ್ಯರು |
| 12. | ಶ್ರೀ.ಶ್ರೀನಿವಾಸ್ | - ಸದಸ್ಯರು |
| 13. | ಶ್ರೀ.ಜಗನ್ನಾಥ್ | - ಸದಸ್ಯರು |

ಪ್ರಥಮವಾಗಿ ವಾರ್ಡ್ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ಆದ ಶ್ರೀಮತಿ.ಶ್ರೀಲ್ಪಶ್ರೀ ರವರು ಸಭೆಗೆ ಆಗಮಸಿದ್ದ ಎಲ್ಲಾ ಅಧಿಕಾರಿಗಳು, ಸದಸ್ಯರು ಮತ್ತು ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು. ಹಿಂದಿನ ಸಭೆಯ ನಡವಳಿಗಳನ್ನು ಓದಿ ತಿಳಿಸಿದರು. ಹಾಗೂ ಇಂದಿನ ಸಭೆಯ ಅಜೆಂಡಾ ಹಾಗೂ ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸಭೆಗೆ ಮಾಹಿತಿ ನೀಡುವಂತೆ ಕೋರಿದರು.

- ವಾರ್ಡ್ ಸುತ್ತ ಮುತ್ತ ಇರುವ ಡೆಬ್ರೀಸನ್ನು ತೆರವುಗೊಳಿಸಲು ಸಿಲ್ಟ್ ಆಂಡ್ ಟ್ರಾಕ್ಟರ್ ಮೂಲಕ ಸ್ವಚ್ಛಗೊಳಿಸಲು ನೋಡಲ್ ಅಧೀಕಾರಿಗಳು ತಿಳಿಸಿದರು.

- 14ನೇ ಮುಖ್ಯರಸ್ತೆಯಲ್ಲಿ ಇರುವ ಖಾಲಿ ಸ್ಥಳಗಳಲ್ಲಿ ಬೆಳೆದಿರುವ ಹುಲ್ಲು ಗಿಡಗಂಟೆಗಳನ್ನು ತೆರವುಗೊಳಿಸಲು ತಿಳಿಸಲಾಯಿತು.

- ಆನಂದಪುರಂ ಮತ್ತು ಸುಧಾಮನಗರ ವ್ಯಾಪ್ತಿಯಲ್ಲಿ ಬರುವ ಒಳಚರಂಡಿಗಳ ಪೈಪುಗಳನ್ನು ಪುನರ್ ನಿರ್ಮಾಣ ಮಾಡಲು ಸಭೆಯಲ್ಲಿ ಹಾಜರಿದ್ದ ಸದಸ್ಯರು ತಿಳಿಸಿದರು. ಅದಂತೆ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ತಿಳಿಸಿದರು.

ವಾರ್ಡ್ ಸಂಖ್ಯೆ:88ರ ವ್ಯಾಪ್ತಿಯಲ್ಲಿರುವ ಆನಂದ್‌ಪುರ ಸಮುದಾಯ ಭವನವನ್ನು ಪುನರ್ ಪ್ರಾರಂಭಿಸಲು ಸಭೆಯಲ್ಲಿ ಹಾಜರಿದ್ದ ಸದಸ್ಯರು ತಿಳಿಸಿದರು, ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ತಿಳಿಸಿದರು.

- ಬೆಸ್ಕಾಂ ರವರು ರಸ್ತೆ ಬದಿಯಲ್ಲಿ ಮರಗಳನ್ನು ಟ್ರಿಮ್ಮಿಂಗ್ ಮಾಡಿ ಮರದ ರೆಂಬೆ ಕೊಂಬೆಗಳನ್ನು ತೆರವುಗೊಳಿಸದೆ ರಸ್ತೆ ಬದಿಯಲ್ಲಿ ಹಾಗೇ ಬಿಸಾಡಿ ಹೋಗಿರುತ್ತಾರೆ, ಇದನ್ನು ತೆರವುಗೊಳಿಸಲು ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲಾಯಿತು.

- ಬೆಸ್ಕಾಂ ರವರು ಅಂಡರ್ ಗ್ರೌಂಡ್ ಕೇಬಲ್‌ಗಳನ್ನು ಅಳವಡಿಸಲು ಮಾಡುತ್ತಿರುವ ಕೆಲಸದಲ್ಲಿ ತಾವೆ ಸ್ವತಃ ಡೆಬ್ರೀಸನ್ನು ತೆರವುಗೊಳಿಸಲು ಸಂಬಂಧಪಟ್ಟ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲಾಯಿತು.

- ಇಸ್ರೋ ಕಾಂಪೌಂಡ್ ಬಳಿ ಇರುವ ಕಲ್ವರ್ಟ್‌ನಲ್ಲಿ ಹೂಳು ತುಂಬಿರುವುದು ಕಂಡುಬಂದಿರುವ ಹಿನ್ನಲೆಯಲ್ಲಿ ಇದಕ್ಕೆ ಸಂಬಂಧಪಟ್ಟ ಬೃಹತ್ ನೀರುಗಾಲುವೆಯ ಸಹಾಯಕ ಅಭಿಯಂತರರು ಕೂಡಲೇ ಹೂಳನ್ನು ತೆರವುಗೊಳಿಸಲು ಕ್ರಮ ಕೈಗಳ್ಳಲಾಗುವುದಾಗಿ ತಿಳಿಸಿದರು.

- 14ನೇ ಮುಖ್ಯರಸ್ತೆ ಹಾಗೂ 13ನೇ 'ಎ' ಮುಖ್ಯರಸ್ತೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸ್ಲಾಬ್‌ಗಳನ್ನು ಮುಚ್ಚಲು ಸಂಬಂದಪಟ್ಟ ಗುತ್ತಿಗೆದಾರರಿಗೆ ಸೂಚಿಸಲು ಸಭೆಯಲ್ಲಿ ತಿಳಿಸಲಾಯಿತು.

- ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪಾರ್ಕ್‌ಗಳನ್ನು ಸ್ವಚ್ಛವಾಗಿ ಹಾಗೂ ಅದರ ನಿರ್ವಹಣೆಯನ್ನು ಮಾಡಲು ತೋಟಗಾರಿಕೆ ಇಲಾಖೆ ರವರಿಗೆ ದೂರವಾಣಿ ಮುಖೇನ ತಿಳಿಸಲಾಯಿತು.

- 18ನೇ 'ಡಿ' ಮುಖ್ಯರಸ್ತೆಯಲ್ಲಿ ಒಳಚರಂಡಿ ಲೈನ್ ಬ್ಲಾಕ್ ಆಗಿದ್ದು, ಅದನ್ನು ಸರಿಪಡಿಸಲು ಹಾಗೂ 9ನೇ ಮತ್ತು 10ನೇ ಅಡ್ಡರಸ್ತೆಯಲ್ಲಿ ಹೊಸದಾಗಿ ಒಳಚರಂಡಿ ಸಂಪರ್ಕವನ್ನು ಅಳವಡಿಸಲು ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರರಿಗೆ ತಿಳಿಸಲಾಯಿತು.

- ವಾಣಿಜ್ಯ ಮತ್ತು ಶಾಲಾ ಕಟ್ಟಡಗಳಿಗೆ ರಿವೈಸ್ಡ್ ನೋಟೀಸ್‌ಗಳನ್ನು ಜಾರಿಮಾಡಲು ಸಂಬಂಧಪಟ್ಟ ಕಂದಾಯ ಪರಿವೀಕ್ಷಕರು ಹಾಗೂ ಕಂದಾಯ ವಸೂಲಿಗಾರರು ರವರಿಗೆ ತಿಳಿಸಲಾಯಿತು.

- 13ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಕಾರ್ಯಪಾಲಕ ಅಭಿಯಂತರು ಸಿ.ವಿ.ರಾಮನ್‌ನಗರ ವಿಭಾಗ ರವರ ಕಛೇರಿಯ ಪಕ್ಕದಲ್ಲಿ ಖಾಲಿ ಇರುವ ಪಾರ್ಕ್ ಸ್ಥಳದಲ್ಲಿ ಪಾಲಿಕೆಯ ಕಂದಾಯ ಇಲಾಖೆ ಕಛೇರಿ ಮತ್ತು ಆರೋಗ್ಯ ವೈದ್ಯಾಧಿಕಾರಿಗಳ ಕಛೇರಿಯನ್ನು ಹೊಸದಾಗಿ ನಿರ್ಮಿಸಲು ಅವಶ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

ಕಾರ್ಯದರ್ಶಿಗಳು
ವಾರ್ಡ್ ಸಮಿತಿ-88

ಅಧ್ಯಕ್ಷರು
ವಾರ್ಡ್ ಸಮಿತಿ, ವಾರ್ಡ್ 88
ಹಾಗೂ ನೋಡಲ್ ಅಧಿಕಾರಿಗಳು,
ವಾರ್ಡ್ 88